

ಮುಜಾವರ್‌ಗಳೊಂದಿಗೆ ಬೆರೆತು ಹೋದ. ಮನೆ ವಿಚಾರ ಹೇಳಲಿಲ್ಲ. ಎಲ್ಲದಕ್ಕೂ ಮೌನ ಧರಿಸಿಕೊಂಡು ತನ್ನೊಂದಿಗೆ ತಾನಿದ್ದರೆ ಸಂತೋಷಯೆನಿಸಿತು.

ಇನ್ನಷ್ಟು ದಿನ ಅಲ್ಲೇ ಇರಬೇಕೆಂದು ಯೋಚಿಸಿದ. ಅಷ್ಟರಲ್ಲೇ ಬೇರೆ ಕಡೆಯಿಂದ ಬಾಡಿಗೆ ಟೆಂಪೋನಲ್ಲಿ ಬಂದ ಕೆಲವು ಮುಜಾವರ್‌ಗಳು ತಾವು ಚೆನ್ನೈ ಸಮೀಪವಿರುವ ಕೋವಲಂ ದರ್ಗಾಕ್ಕೆ ಹೋಗುತ್ತಿರುವುದಾಗಿ ಹೇಳಿ, ಬರುವುದಾದರೆ ಬನ್ನಿ ಸೀಟ್‌ಗೆ ಇಷ್ಟು ನಿಗದಿ ಮಾಡಿದ್ದೇವೆ ಎಂದರು.

ಕೋವಲಂ ದರ್ಗಾ ಸಮುದ್ರ ಪಕ್ಕ ಇರುವುದನ್ನು ತಿಳಿದು ಸಲೀಂಗೆ ಕುತೂಹಲ ಉಂಟಾಯಿತು. ಸಮುದ್ರವನ್ನು ಅವನು ಸಿನಿಮಾಗಳಲ್ಲಿ ಮಾತ್ರ ನೋಡಿದ್ದ ಹೊರತು, ಪ್ರತ್ಯಕ್ಷವಾಗಿ ನೋಡಿರಲಿಲ್ಲ. ಹೊಸ ಜಾಗ ನೋಡುವುಕ್ಕೆ ಇದೊಂದು ಉತ್ತಮ ಅವಕಾಶವೆಂದು ಟೆಂಪೋ ಹೋಗುವವರೆಗೂ ಯೋಚಿಸಿತ್ತಾ ನಿಂತು ಕೊನೆ ಕ್ಷಣದಲ್ಲಿ ಟೆಂಪೋ ಹತ್ತಿದ.

ಚೆನ್ನೈಯಿಂದ ಸುಮಾರು ಹದಿನೈದು ಕಿಲೋಮೀಟರ್ ದೂರದಲ್ಲಿರುವ ಕೋವಲಂಗೆ ಟೆಂಪೋ ತಲುಪಿದಾಗ ಅರ್ಧ ರಾತ್ರಿಯಾಗಿತ್ತು. ಅವನೊಂದಿಗೆ ಬಂದಿದ್ದ ಮುಜಾವರ್‌ಗಳ ಪೈಕಿ ಬಹಳಷ್ಟು ಮಂದಿ ಸಿಕ್ಕಿದ ಕಡೆ ಮಲಗಿದರು. ಇನ್ನು ಕೆಲವರು ದರ್ಗಾದ ಹೊರಗಡೆ ನಿಂತು ಎರಡು ಕೈಗಳನ್ನು ಮೇಲೆತ್ತಿ ದುವಾ (ಪ್ರಾರ್ಥನೆ) ಮಾಡಿ, ಸಮುದ್ರದ ಕಡೆ ಹೆಜ್ಜೆಯಿಟ್ಟರು. ಅಂದು ಹುಣ್ಣಿಮೆ ಬೇರೆಯಾಗಿತ್ತು. ಚಂದ್ರ ಸಮುದ್ರದ ಮಧ್ಯದಲ್ಲಿ ಈಜುತ್ತಿದ್ದ. ಅಲೆಗಳು ಸಮುದ್ರದ ಪಕ್ಕದಲ್ಲಿರುವ ಬಂಡೆಗಳನ್ನ ಅಪ್ಪಳಿಸುತ್ತ ಚೂರು ಚೂರಾಗುತ್ತಿದ್ದವು.

ಸಲೀಂ ಬಂಡೆಯೊಂದರ ಮೇಲೆ ಕುಳಿತು, ಯೋಚಿಸಿದ.

ಒಂದು ವೇಳೆ ನಾನೇನಾದರೂ ರಸೂಲ್‌ನನ್ನು ಕೊಲೆ ಮಾಡಿಬಿಟ್ಟಿದ್ದರೆ, ಈಗ ಜೈಲಿನ ಕತ್ತಲೆಯ ಕೋಣೆಯಲ್ಲಿರಬೇಕಾಗಿತ್ತು. ಮನೆ ಮಂದಿಗೂ ನೆಮ್ಮದಿ ಇರುತ್ತಿರಲಿಲ್ಲ. ಆದರೀಗ ತಾನು ಸ್ವತಂತ್ರವಾಗಿದ್ದೇನೆ. ಮನೆಯಲ್ಲಿ ಹೇಳಿ ಬಂದಿರುವುದರಿಂದ ಅವರು ಆತಂಕ ಕೊಳ್ಳುವುದಿಲ್ಲ.

ಶಕೀಲಾ ಈಗಿಲ್ಲ. ರಸೂಲ್ ಸಹ ಇನ್ನು ನೂರು ವರ್ಷ ಉಳಿಯುವುದಿಲ್ಲ. ಒಂದಲ್ಲ ಒಂದು ದಿನ ಸಾಯುತ್ತಾನೆ. ಸಮುದ್ರದೊಂದಿಗೆ ನಾನಿದ್ದೇನೆ, ಇದಕ್ಕಿಂತ ಸಂತೋಷದ ಕ್ಷಣಗಳು ಬೇಕಿಲ್ಲ.

ಸಲೀಂ ಇಲ್ಲಿ ಬಂದು ವಾರದ ಬಳಿಕ ಅದ್ದೂರಿಯಾಗಿ ಉರುಸ್ (ವರ್ಷಕ್ಕೊಮ್ಮೆ ನಡೆಯುವ ಉತ್ಸವ)